**ದಿವಾಣಿ ನ್ಯಾಯಾಲಯ ಮತ್ತು ಜೆ. ಎಮ್. ಎಫ್. ಸಿ. ನ್ಯಾಯಾಲಯ, ಜೇವರ್ಗಿ.**

**ಸಿಸಿ ನಂ.33/2019**

**ಚಾಸಾ-5/ಪಿಡಬ್ಲೂ -3**

| | |
|---|---|
| ಹೆಸರು | ಚಂದ್ರಕಾಂತ |
| ತಂದೆ ಹೆಸರು | ಭಾಗಪ್ಪ |
| ವಯಸ್ಸು | 41 ವರ್ಷಗಳು |
| ಉದ್ಯೋಗ | ಎ ಎಸ್ ಐ |
| ವಾಸ ಸ್ಥಳ | ಯಡ್ರಾಮಿ |

**ದಿನಾಂಕ 27.08.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭೀಯೋಜಕರಿಂದ.**

2016 ರಿಂದ 2019 ರವರೆಗೆ ನೆಲೋಗಿ ಠಾಣೆಯಲ್ಲಿ ನಾನು ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 26.06.2015 ರಂದು ರಂದು ರಾತ್ರಿ 12.00 ನಾನು ಗಸ್ತ ಕರ್ತವ್ಯದಲ್ಲಿದ್ದಾಗ ಚಾಸಾ-1 ರವರು ದೂರವಾಣಿ ಮುಖಾಂತರ ನನಗೆ ಠಾಣೆಗೆ ಹೋದಾಗ ಪಂಚರು ಠಾಣೆಯಲ್ಲಿ ಹಾಜರಿದ್ದು ಅವರನ್ನು ಚಾಸಾ-1 ರವರು ಕರೆಸಿರುತ್ತಾರೆ. ಚಾಸಾ-1 ರವರು ಹಳವಾರ ಸೀಮಾಂತರದ ಭೀಮಾನದಿಯಲ್ಲಿ ಟ್ರ್ಯಾಕ್ಟರನಲ್ಲಿ ಅಕ್ರಮವಾಗಿ ಮರಳು ತುಂಬುತ್ತಿದ್ದಾರೆಂದು ಚಾಸಾ-1 ರವರು ಮಾಹಿತಿ ತಿಳಿಸಿ ದಾಳಿ ಮಾಡಬೇಕೆಂದು ತಿಳಿಸಿದರು. ನಂತರ ಚಾಸಾ-1 ರಿಂದ 4 ಮತ್ತು ನಾನು ರಾತ್ರಿ 2.30 ಗಂಟೆಗೆ ಹರವಾಳದ ಭೀಮಾ ನದಿಗೆ ಹೋಗಿ ನೋಡಲಾಗಿ ಅಲ್ಲಿ ಒಬ್ಬ ವ್ಯಕ್ತಿ ಒಂದು ಟ್ರ್ಯಾಕ್ಟರನಲ್ಲಿ ಮರಳು ತುಂಬುತ್ತಿದ್ದು ನಮ್ಮನ್ನು ನೋಡಿ ಟ್ರ್ಯಾಕ್ಟರನಲ್ಲಿದ್ದ ಮರಳನ್ನು ಡಂಪ್ ಮಾಡಿ ಅಲ್ಲೇ ಬಿಟ್ಟು ಹೋದನು. ನಂತರ ನಾವು ಟ್ರ್ಯಾಕ್ಟರನ್ನು ಪರಿಶೀಲಿಸಲಾಗಿ ಅದು ನೀಲಿ ಬಣ್ಣದ ಸ್ವರಾಜ ಕಂಪನಿಯ ಟ್ರ್ಯಾಕ್ಟರ ಇದ್ದು ಅದಕ್ಕೆ ನಂಬರ ಇರಲಿಲ್ಲ. ಟ್ರಾಲಿ ನಂ.ಕೆಎ-32/ಟಿ-1124 ಆಗಿತ್ತು. ಚಾಸಾ-1 ರವರು ಪಂಚನಾಮೆಯನ್ನು ರಾತ್ರಿ 2.30 ರಿಂದ 3.30 ರವರೆಗೆ ಪಂಚರ ಸಮಕ್ಷಮ ಜರುಗಿ ಟ್ರ್ಯಾಕ್ಟರ ಹಾಗೂ ಟ್ರಾಲಿಯನ್ನು ವಶಪಡಿಸಿಕೊಂಡಿರುತ್ತಾರೆ. ನಂತರ ಬೆಳಗಿನ ಜಾವ 5.00 ಗಂಟೆಗೆ ಟ್ಯಾಕ್ಟರ, ಟ್ರಾಲಿ ಮತ್ತು ಜಪ್ತಿ ಪಂಚನಾಮೆಯೊಂದಿಗೆ ಠಾಣೆಗೆ ಬಂದು ಚಾಸಾ-1 ರವರು ಠಾಣಾಧಿಕಾರಿಗೆ ವರದಿಯೊಂದಿಗೆ ವಶಕ್ಕೆ ನೀಡಿರುತ್ತಾರೆ. ವಶಪಡಿಸಿಕೊಂಡ ಟ್ರ್ಯಾಕ್ಟರನ್ನು ನೋಡಿದರೆ ಗುರುತಿಸುತ್ತೇನೆ. ಈಗ ನಾನು 04 ಪೋಟೋಗಳನ್ನು ನೋಡುತ್ತಿದ್ದು ಅವುಗಳಲ್ಲಿ ಕಾಣುವ ಟ್ರ್ಯಾಕ್ಟರನ್ನು ಆ ದಿನ ನಾವು ವಶಪಡಿಸಿಕೊಂಡಿರುತ್ತೇವೆ. ಸದರಿ ಪೋಟೋಗಳನ್ನು ನಿಪಿ-3 ರಿಂದ 6 ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಚಾಸಾ-2 ಮತ್ತು 3 ರವರ ಹಲವಾರು ಪ್ರಕರಣಗಳಲ್ಲಿ ಪಂಚರಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿತನು ನಮ್ಮಿಂದ ಅಂದಾಜು 100 ಮೀಟರ ಅಂತರದಿಂದ ಓಡಿ ಹೋಗಿರುತ್ತಾನೆ. ಸಾಮಾನ್ಯವಾಗಿ ರಾತ್ರಿ ಸಮಯದಲ್ಲಿ ದೂರದಿಂದ ಆರೋಪಿಯನ್ನು ಗುರುತಿಸಲು ಆಗುವುದಿಲ್ಲ ಎಂದರೆ ನಿಜ. ಆರೋಪಿ ಮರುಳು ತುಂಬುವ ಸಮಯದಲ್ಲಿ ಬುಟ್ಟಿ ಹಾಗೂ ಸನಿಕೆ ಇದ್ದವು ಎಂದರೆ ನಿಜ. ಆದರೆ ಅವುಗಳನ್ನು ನಾವು ವಶಪಡಿಸಿಕೊಂಡಿಲ್ಲ. ಟ್ರ್ಯಾಕ್ಟರನ್ನು ಯಾರು ಚಲಾಯಿಸಿಕೊಂಡು ಬಂದರು ಎಂದು ನನಗೆ ಗೊತ್ತಿಲ್ಲ. ಓಡಿ ಹೋಗುತ್ತಿದ್ದ ಆರೋಪಿಯನ್ನು ಆ ದಿನ ಕತ್ತಲಾಗಿದ್ದರಿಂದ ಹಿಡಿಯಲು ಪ್ರಯತ್ನಿಸಿಲ್ಲ. ಘಟನಾ ಸ್ಥಳದಲ್ಲಿ ಆರೋಪಿಯನ್ನು ಹೊರತುಪಡಿ ಯಾರೂ ಇರಲಿಲ್ಲ.

ಚಾಸಾ-1 ರವರು ನನ್ನ ಮೇಲಾಧಿಕಾರಿಯಾಗಿರುವುದರಿಂದ ಅವರು ನೀಡಿದ ಸುಳ್ಳು ದೂರಿಗೆ ಅನುಗುಣವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ದಾಳಿ ಮಾಡಿದೆವು ಆಗ ಟ್ರ್ಯಾಕ್ಟರ ಚಾಲಕನ ನಮ್ಮನ್ನು ನೋಡಿ ಓಡಿ ಹೋದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚರ ಸಮಕ್ಷಮ ವಾಹನವನ್ನು ವಶಪಡಿಸಿಕೊಂಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರಕಾರಕ್ಕೆ ಅಂಕಿ ಅಂಶ ಒದಗಿಸುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿಗೂ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲದಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿರುವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ.ಇದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು
ಜೇವರ್ಗಿ